ಗುತ್ತಿಗೆದಾರರನ್ನು ನಿಗಧಿಪಡಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಲ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ

83(71); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಲಿಂಗಸಗೂರು ತಾಲ್ಲೂಕು, ಗೋಲಪಲ್ಲಿ ಗ್ರಾಮದ ಹಿನ್ನೀರಿನಲ್ಲಿ ಜಲ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಇ) ಹಾಗಿದ್ದಲ್ಲಿ, ಜಲ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಸರ್ಕಾರ ಅನುದಾನವನ್ನೇನಾದರು ನಿಗಧಿಪಡಿಸಿ ಯೋಜನೆಯನ್ನು ಸಿದ್ದಪಡಿಸಿದೆಯೇ

ಈ) ಹಾಗಿದ್ದಲ್ಲಿ; ನಿಗದಿಪಡಿಸಿರುವ ಯೋಜನಾ ಗಾತ್ರದ ಅನುದಾನದ ಮೊತ್ತವೆಷ್ಟು;

ಉ) ಪ್ರಸಕ್ತ ಸಾಲಿನಲ್ಲಿಯೇ ಲಿಂಗಸಗೂರು ತಾಲ್ಲೂಕು ಗೋಲಪಲ್ಲಿ ಗ್ರಾಮದ ಹಿನ್ನೀರಿನಲ್ಲಿ ಜಲ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಲಿಂಗಸುಗೂರು ತಾಲ್ಲೂಕು, ಗೋಲಪಲ್ಲಿ ಗ್ರಾಮದಲ್ಲಿ ಖಾಸಗಿ ಯೋಜನಾದಾದರಾದ M/s Sri Balaji Biomass Power (p) Ltd. ರವರಿಗೆ ಕೃಷ್ಣ ನದಿಗೆ ಅಡ್ಡಲಾಗಿ ಹಟ್ಟಿ ಹೊಳೆ, ಗೋಲಪಲ್ಲಿ ಗ್ರಾಮದಲ್ಲಿ 2 ಮೆ.ವ್ಯಾ. ಕಿರುಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ: EN 328 NCE 2007, ದಿನಾಂಕ: 17.02.2010 ರಲ್ಲಿ ಅನುಮತಿ ನೀಡಲಾಗಿದೆ.

ಆ) ಸರ್ಕಾರವು ಸದರಿ ಯೋಜನೆಗೆ ಅನುಮತಿಸಿ ಆದೇಶ ಹೊರಡಿಸಿರುವ ದಿನಾಂಕದಿಂದ 5 ವರ್ಷಗಳ ಕಲಮಿತಿಯೊಳಗೆ ಯೋಜನಾದಾರರು ಯೋಜನೆಯನ್ನು ಅನುಷ್ಠಾನಗೊಲೀಸಬೇಕಾಗಿರುತ್ತದೆ.

ಇ) ಸದರಿ ಯೋಜನೆಯನ್ನು ಖಾಸಗಿ ಯೋಜನೆದಾರರು ನಿರ್ವಹಿಸುವುದರಿಂದ ಸರ್ಕಾರದಿಂದ ಯವುದೇ ಅನುದಾನವನ್ನು ನೀಡಲಾಗುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಕುಡಿಯುವ ನೀರಿನ ವಿಚಾರ

***85(124); ಶ್ರೀ ನಾರಾಯಣಸ್ವಾಮಿ ಎಸ್.ಎನ್ (ಬಂಗಾರಪೇಟೆ)**

ಅ) ಬಂಗಾರಪೇಟೆ ಪುರಸಭೆಯಲ್ಲಿ 2 ತಿಂಗಳಿಗೊಮ್ಮೆ ನೀರು ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಬಂಗಾರಪೇಟೆ ಪುರಸಭೆಯಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು.

ಇ) ಪುರಸಭೆ ಅಭಿವೃದ್ಧಿ ಹಾಗೂ ಕುಡಿಯುವ ನೀರಿಗಾಗಿ ವಿಶೇಷ ಅನುದಾನ ಬಿಡುಗಡೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ.

ಈ) ವಿಶೇಷ ಅನುದಾನ ಬಿಡುಗಡೆ ಮಾಡುವುದಿದ್ದಲ್ಲಿ ಎಷ್ಟು ಮೊತ್ತ ಯಾವ ರೀತಿ ಬಳಸಲು, ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

ಅ) ಬಂದಿದೆ.